**ಕರ್ನಾಟಕ ಸರ್ಕಾರ**

(ಸಾರಿಗೆ ಇಲಾಖೆ)

**ಮಾಹಿತಿ ಹಕ್ಕು ಅಧಿನಿಯಮ 2005ರ ನಿಯಮ 4(1) ಬಿ ಪ್ರಕಾರ ಪ್ರಕಟಿಸಿರುವ ಮಾಹಿತಿಗಳು**

ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಯವರ ಕಛೇರಿ, ಗೌರಿಬಿದನೂರು ತನಿಖಾಠಾಣೆ, ಬಸವಪುರ ಗ್ರಾಮ, ಬೆಂಗಳೂರು-ಹಿಂದೂಪುರ ರಸ್ತೆ, ಗೌರಿಬಿದನೂರು ತಾಲ್ಲೂಕು ಪಿನ್ 561208 ಚಿಕ್ಕಬಳ್ಳಾಪುರ ಜಿಲ್ಲೆ ಇಲ್ಲಿ ಕಾರ್ಯನಿರ್ವಹಿಸುತ್ತಿದೆ.

**ಮಾಹಿತಿ ಹಕ್ಕು ಅಧಿನಿಯಮ 2005ರ ನಿಯಮ 4(1) ಬಿ ಅಡಿಯಲ್ಲಿ 01.04.2016 ರಿಂದ 31.03.2017 ವರೆಗೆ ಪ್ರಕಟಿಸಲಾದ ವಿವರಗಳು.**

**41(ಬಿ) ರಚನೆ ಕಾರ್ಯಗಳು ಮತ್ತು ಕರ್ತವ್ಯಗಳ ವಿವರಗಳು**

ರಾಜ್ಯದಲ್ಲಿ ತನಿಖಾಠಾಣೆಗಳಲ್ಲಿ ಗೌರಿಬಿದನೂರು ತನಿಖಾಠಾಣೆಯು ಒಂದಾಗಿದೆ. ಕರ್ನಾಟಕ ಮತ್ತು ಆಂಧ್ರಪ್ರದೇಶ ರಾಜ್ಯಗಳ ಗಡಿ ಭಾಗವನ್ನು ಸಂಪರ್ಕಿಸುವಲ್ಲಿ ಬೆಂಗಳೂರು-ಹಿಂದೂಪುರ ರಸ್ತೆಯಲ್ಲಿ, ಈ ತನಿಖಾಠಾಣೆಯು ದಿನದ ಇಪ್ಪತ್ತ ನಾಲ್ಕು ಗಂಟೆಗಳು ಕಾರ್ಯನಿರ್ವಹಿಸುತ್ತಿದೆ. ಸದರಿ ತನಿಖಾಠಾಣೆಯು ಮಾನ್ಯಸಾರಿಗೆ ಆಯುಕ್ತರು (ಪರಿಸರ ಮತ್ತು ಇ-ಗವರ್ನೆನ್ಸ್) 1ನೇ ಮಹಡಿ, ಬಿ.ಎಂ.ಟಿ.ಸಿ. ಸಂಕೀರ್ಣ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು-560027.ಮತ್ತು ಮಾನ್ಯ ಜಂಟಿಸಾರಿಗೆ ಆಯುಕ್ತರು, ಬೆಂಗಳೂರು ಗ್ರಾಮಾಂತರ, 4ನೇ ಮಹಡಿ, ಪೋಡಿಯಂ ಬ್ಲಾಕ್, ವಿ.ವಿ. ಗೋಪುರ, ಡಾ. ಅಂಬೇಡ್ಕರ್ ವೀದಿ, ಬೆಂಗಳೂರು ಇವರುಗಳ ನಿಯಂತ್ರಣಕ್ಕೆ ಒಳಪಟ್ಟಿರುತ್ತದೆ.

**ಒಟ್ಟು ಸಿಬ್ಬಂದಿ ವರ್ಗದ ಸಂಖ್ಯೆ**

| ಮಂಜೂರಾತಿಯಾದ ಹುದ್ದೆ ಮತ್ತು ಹುದ್ದೆಯ ಹೆಸರು | ಕರ್ತವ್ಯನಿರ್ವಹಿಸುತ್ತಿರುವುದು | ಖಾಲಿ |
|---|---|---|
| ಸ.ಪ್ರಾ,.ಸಾ,ಅ-1 | 1 | ಖಾಲಿ |

ಒಬ್ಬ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಯು ಈ ತನಿಖಾ ಠಾಣೆಯಲ್ಲಿ ಪ್ರಭಾರ ಸಿಬ್ಬಂದಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಹಿರಿಯ ಮೋಟಾರು ವಾಹನಗಳ ನಿರೀಕ್ಷಕರುಗಳು ಮತ್ತು ಮೋಟಾರು ವಾಹನಗಳ ನಿರೀಕ್ಷಕರುಗಳು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ ಕೋಲಾರದಿಂದ ನಿಯೋಜನೆ ಮೇರೆಗೆ ಈ ತನಿಖಾಠಾಣೆಯಲ್ಲಿ ಕಾರ್ಯನಿರ್ವಾಹಕ ಸಿಬ್ಬಂದಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಇತರೆ ಸಿಬ್ಬಂದಿ ವರ್ಗವು ಬೇರೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಯಿಂದ ನಿಯೋಜನೆಗೊಂಡು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಸದರಿ ತನಿಖಾಠಾಣೆಯಲ್ಲಿ ಈ ಕೆಳಸೂಚಿಸಿರುವ ಕೆಲಸಕಾರ್ಯಗಳನ್ನು ಪ್ರಮುಖವಾಗಿ ನಿರ್ವಹಿಸಲ್ಪಡುತ್ತವೆ.

1) ಹೊರ ರಾಜ್ಯ ಗಳಿಂದ ಕರ್ನಾಟಕ ರಾಜ್ಯಕ್ಕೆ ಪ್ರವೇಶಿಸುವ ಸರಕು ಸಾಕಣೆ ವಾಹನಗಳಿಗೆ ತಾತ್ಕಾಲಿಕ ಪರವಾನಿಗೆ ಮತ್ತು ಪ್ರಯಾಣಿಕರ ವಾಹನಗಳಿಗೆ ವಿಶೇಷ ಪರವಾನಿಗೆಯನ್ನು ನಿಗಧಿತ ತೆರಿಗೆ ಮತ್ತು ಶುಲ್ಕ ವಸೂಲಿ ಮಾಡಿ ನಿಗಧಿತ ಅವಧಿಗೆ ನೀಡಲ್ಪಡುತ್ತದೆ.

2) ತೆರಿಗೆ ಪಾವತಿಸದ ವಾಹನಗಳನ್ನು ತಪಾಸಣೆ ಮಾಡಿ ತೆರಿಗೆ ಸಂಗ್ರಹಿಸಲಾಗುತ್ತದೆ.

3) ಮೋಟಾರು ವಾಹನಗಳ ಕಾಯಿದೆ ಮತ್ತು ನಿಯಮಗಳ ಪ್ರಕಾರ ಕಾನೂನು ರೀತ್ಯ ಕ್ರಮ ಕೈಗೊಳ್ಳಲಾಗುತ್ತದೆ.

**2. ಅಧಿಕಾರಿಗಳು ಮತ್ತು ನೌಕರರ ಅಧಿಕಾರ ಮತ್ತು ಕರ್ತವ್ಯಗಳು** :

ತನಿಖಾ ಠಾಣೆಯಲ್ಲಿ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಮುಖ್ಯಸ್ಥರಾಗಿರುತ್ತಾರೆ. ಸದರಿ ತನಿಖಾಠಾಣೆಯ ಕೆಲಸಗಳ ಉಸ್ತುವಾರಿಯನ್ನು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನೋಡಿಕೊಳ್ಳುತ್ತಾರೆ.

ಮೋಟಾರುವಾಹನಗಳ ಕಾಯಿದೆ 1988 ರ ಕಲಂ 213(5)ರ ಅಡಿಯಲ್ಲಿ ಮತ್ತು ಕರ್ನಾಟಕ ಮೋಟಾರು ವಾಹನಗಳ ನಿಬಂಧನೆಗಳು 1989 ರ ನಿಯಮ 259(2) ರ ಅಡಿಯಲ್ಲಿ ಹಿರಿಯ ಮೊಟಾರು ವಾಹನ ನಿರೀಕ್ಷಕರುಗಳು ಮತ್ತು ಮೋಟಾರು ವಾಹನ ನಿರೀಕ್ಷಕರು ಕಾರ್ಯ ನಿರ್ವಾಹಕ ಸಿಬ್ಬಂದಿಯಾಗಿ ಕರ್ತವ್ಯ ನಿರ್ವಹಿಸುವರು

**3. <u>ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸುವ ವಿಧಾನ ಉಸ್ತುವಾರಿ ಹಂತಗಳು ಮತ್ತು ಜವಾಬ್ದಾರಿ</u>**

ವಿಷಯ ನಿರ್ವಾಹಕ ಹಂತದಲ್ಲಿ ಕಡತಗಳ ಮತ್ತು ದಾಖಲೆಗಳ ನಿರ್ವಹಣೆ / ಪರಿಶೀಲನೆ ಉಸ್ತುವಾರಿ ಕಛೇರಿಯಲ್ಲಿ ಸಂಗ್ರಹಿಸುವ ರಾಜಸ್ವವನ್ನು ಬ್ಯಾಂಕಿಗೆ ಜಮೆ ಮಾಡುವುದನ್ನು ಪರಿಶೀಲನೆ, ಆಡಿಟ್ ವರದಿಗಳ ಪರಿಶೀಲನೆ, ಸರ್ಕಾರಕ್ಕೆ / ಕೇಂದ್ರ ಕಛೇರಿಗೆ ಪ್ರವರ್ತನ ಕಾರ್ಯ / ರಾಜಸ್ವ ಸಂಗ್ರಹ ಮತ್ತಿತ್ತರ ಮಾಹಿತಿಗಳನ್ನು ಪತ್ರ ವ್ಯವಹರಗಳ ಮೂಲಕ ತಿಳಸುವುದು. ಕಛೇರಿಯ ಉಸ್ತುವಾರಿ ನಿರ್ವಹಿಸುವುದು ಹಾಗೂ ಸಾರ್ವಜನಿಕ ಸಂಪರ್ಕಾಧಿಕಾರಿ –

ಸಾರ್ವಜನಿಕ ಮಾಹಿತಿ ಅಧಿಕಾರಿಯ ಕರ್ತವ್ಯಗಳು, ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಗಿರುತ್ತದೆ.

**4. ಕರ್ತವ್ಯಗಳ ನಿರ್ವಹಣೆಗೆ ರೂಪಿಸಿರುವ ಮಾನದಂಡ ಅಥವಾ ರೂಪುರೇಷೆಗಳು**

(1) ಮೋಟಾರು ವಾಹನಗಳ ಕಾಯಿದೆ ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳು ತೆರಿಗೆ ಕಾಯಿದೆ ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳು, ಕರ್ನಾಟಕ ನಾಗರೀಕ ಸೇವಾ ನಿಯಮಗಳು, ಕರ್ನಾಟಕ ಹಣಕಾಸು ನಿಬಂಧನೆಗಳು, ಕರ್ನಾಟಕ ಖಜಾನೆ ನಿಬಂಧನೆಗಳು ಸಾದಿಲ್ವಾರು ಖರ್ಚುವೆಚ್ಚಗಳ ಕೈಪಿಡಿ ಮತ್ತು ಇತರೆ ಸಂಬಂಧಪಟ್ಟ ಸರ್ಕಾರಿ ಆಜ್ಞೆಗಳು, ಆದೇಶಗಳು ಮತ್ತು ಅಧಿಸೂಚನೆಗಳ ಪ್ರಕಾರ ಆಡಳಿತ ಅಧಿಕಾರಿಯಾಗಿ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಯು ಕರ್ತವ್ಯ ನಿರ್ವಹಿಸುತ್ತಾರೆ.

(2) ಮೋಟಾರು ವಾಹನಗಳ ಕಾಯಿದೆ ಮತ್ತು ನಿಯಮಗಳು ತೆರಿಗೆ ಕಾಯಿದೆ ಮತ್ತು ನಿಯಮಗಳು ಹಾಗೂ ಇಲಾಖೆಯಿಂದ ಸಾರ್ವಜನಿಕ ಕೆಲಸಗಳನ್ನು ನೀಡಲಸ್ಪಟ್ಟಿರುವ ನಾಗರೀಕ ಸನ್ನದ್ದು ಇವುಗಳ ಪ್ರಕಾರ ಕಾರ್ಯ ನಿರ್ವಾಹಕ ಸಿಬ್ಬಂದಿಗಳಾದ ಹಿರಿಯ ಮೋಟಾರು ವಾಹನಗಳ ನಿರೀಕ್ಷಕರು ಮತ್ತು ಮೋಟಾರು ವಾಹನಗಳ ನಿರೀಕ್ಷಕರುಗಳು ತಮ್ಮ ಕರ್ತವ್ಯವನ್ನು ನಿರ್ವಹಿಸುವುದು. ಜೊತೆಗೆ ಅವರು ಸರ್ಕಾರ ಕಾಲಕಾಲಕ್ಕೆ ಹೊರಡಿಸುವ ಅಧಿಸೂಚನೆಗಳು, ಸುತ್ತೋಲೆಗಳು, ಇತರೆ ಆಜ್ಞೆಗಳು ಮತ್ತು ಆದೇಶಗಳ ಪ್ರಕಾರ. ಕರ್ತವ್ಯ ನಿರ್ವಹಿಸುವುದು,

**5. ಕಛೇರಿಯು ನಿರ್ವಹಿಸುವ ಅಥವಾ ಅದರ ಅಧೀನದಲ್ಲಿರುವ ಅಥವಾ ಅದರ ಸಿಬ್ಬಂದಿಯು ಕೆಲಸ ನಿರ್ವಹಣೆಗಾಗಿ ಪಾಲಿಸುವ ನಿಯಮಗಳು, ಕಾನೂನುಗಳು ನಿರ್ದೇಶನಗಳು ಮ್ಯಾನ್ಯುಯಲ್‌ಗಳು ಮತ್ತು ದಾಖಲೆಗಳು**

1) ಮೋಟಾರು ವಾಹನಗಳ ಕಾಯಿದೆ 1988

2) ಕೇಂದ್ರ ಮೋಟಾರು ವಾಹನಗಳ ನಿಯಮಗಳು, 1989

3) ಕರ್ನಾಟಕ ಮೋಟಾರು ವಾಹನಗಳ ನಿಯಮಗಳು, 1989'

4) ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಕಾಯಿದೆ,1957

5) ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿಯಮಗಳು, 1957

6) ಸರ್ಕಾರವು ಕಾಲಕಾಲಕ್ಕೆ ನೀಡುವ ಅಧಿಸೂಚನೆಗಳು, ಸುತ್ತೋಲೆಗಳು, ಇತರೆ ಆಜ್ಞೆಗಳು, ಆದೇಶಗಳನ್ನು ಅನುಸರಿಸಿ ಕರ್ತವ್ಯ ನಿರ್ವಹಿಸುವುದು,

6. **ಕಛೇರಿಯು ಹೊಂದಿರುವ ಅಥವಾ ಅದರ ಅಧೀನದಲ್ಲಿರುವ ದಾಖಲೆಗಳ ಪಟ್ಟಿ.**

ಈ ತನಿಖಾಠಾಣೆಲ್ಲಿ ನೀಡಲಾಗಿರುವ ರಹದಾರಿ ಮತ್ತು ತನಿಖಾ ವರದಿಗಳು.

7. **ನಿಯಮಗಳು ರಚನೆ ಅಥವಾ ಅವುಗಳ ಅನುಷ್ಠಾನದಲ್ಲಿ ಸಾರ್ವಜನಿಕರೊಂದಿಗೆ ಸಮಾಲೋಚನೆ: ಪಾಲ್ಗೊಳ್ಳುವಿಕೆ ಅಥವಾ ಅಭಿಪ್ರಾಯ ಪಡೆಯಲು ಇರುವ ವ್ಯವಸ್ಥೆ.**

ಸರ್ಕಾರದ ಮಟ್ಟದಲ್ಲಿ ನಿಯಮಾವಳಿಗಳು ರಚನೆಯಾಗಿರುತ್ತವೆ.

8. **ಕಛೇರಿಯ ಅಂಗವಾಗಿ ರಚಿಸಿರುವ ನಿಗಮ, ಮಂಡಳಿ, ಸಮಿತಿ ಅಥವಾ ಇನ್ನಾವುದೇ ಪ್ರಾಧಿಕಾರಗಳ ಪಟ್ಟಿ, ಅವುಗಳ ಸಭೆಗಳಲ್ಲಿ ಸಾರ್ವಜನಿಕರು ಪಾಲ್ಗೊಳ್ಳಲು ಅಥವಾ ಅವುಗಳ ನಡುವಳಿಗಳು ಸಾರ್ವಜನಿಕರಿಗೆ ಲಭ್ಯವಾಗುವ ಸಾಧ್ಯತೆ.**

ಅನ್ವಯಿಸುವುದಿಲ್ಲ

9. **ಅಧಿಕಾರಿಗಳ ಮತ್ತು ಸಿಬ್ಬಂದಿಯ ಸೂಚಿ**

| ಕ್ರ ಸಂ | ಅಧಿಕಾರಿಯ ಹೆಸರು | ಹುದ್ದೆ | ದೂರವಾಣಿ ಸಂಖ್ಯೆ | ವಿಳಾಸ |
|---|---|---|---|---|
| 1 | ಟಿ.ತಿಮ್ಮರಯಪ್ಪ (ಪ್ರಭಾರ) | ಸ.ಪ್ರಾ.ಸಾ.ಅ | 9449863499 | ಸ.ಪ್ರಾ.ಸಾ.ಅ ಗೌರಿಬಿದನೂರು |

10. **ಪ್ರತಿಯೊಬ್ಬ ಸಿಬ್ಬಂದಿ ಪಡೆಯುವ ಮಾಸಿಕ ಸಂಬಳ ಮತ್ತು ನಿಯಮಗಳ ಪ್ರಕಾರ ಪಡೆಯುವ ಪರಿಹಾರ.**

ದಿನಾಂಕ 31.03.2017 ರವರೆಗೆ ಅಧಿಕಾರಿಯು ತನಿಖಾ ಠಾಣೆಯಲ್ಲಿ ಪಡೆದ ವೇತನದ ವಿವರಗಳು.

| ಕ್ರ ಸಂ | ಅದಿಕಾರಿಗಳ ಹೆಸರು | ಒಟ್ಟು ವೇತನ | | | | |
|---|---|---|---|---|---|---|
| | | ಮೂಲ ವೇತನ | ತುಟ್ಟಿ ಭತ್ಯೆ | ಮನೆ ಬಾಡಿಗೆ ಭತ್ಯೆ | ಇತರೆ | ಒಟ್ಟು |
| 1 | ಟಿ.ತಿಮ್ಮರಯಪ್ಪ | -- | -- | -- | -- | -- |

11. **ಎಲ್ಲಾ ಯೋಜನೆಗಳಿಗೆ ಹಂಚಿಕೆಯಾಗಿರುವ ಅನುದಾನ ಸಂಭವನೀಯ ವೆಚ್ಚ ಮತ್ತು ವಿತರಣೆ ಮಾಡಿದ ವಿವರಗಳು**

ತನಿಖಾ ಠಾಣೆಯಲ್ಲಿ ಕಛೇರಿಯ ವೆಚ್ಚಕ್ಕಾಗಿ ಈ ಕೆಳಕಂಡ ಲೆಕ್ಕಶೀರ್ಷಿಕೆಯಲ್ಲಿ ಸಾರಿಗೆ ಆಯುಕ್ತರಿಂದ ಅನುದಾನ ಬಿಡುಗಡೆ ಮಾಡಲಾಗಿದೆ

| **ಲೆಕ್ಕ ಶೀರ್ಷಿಕೆ** | **ಖರ್ಚುವೆಚ್ಚಗಳು ರೂ.ಗಳಲ್ಲಿ** |
|---|---|
| ಪ್ರಾದೇಶಿಕ ಸಾರಿಗೆ ಪ್ರಾಧಿಕಾರ | |
| 071 | 91106 |
| 051 | 576934 |
| 041 | – |

12. **ಸಹಾಯಧನ ನೀಡುವ ಕಾರ್ಯಕ್ರಮಗಳು ಮೊತ್ತ ಮತ್ತು ಫಲಾನುಭವಿಗಳ ಪಟ್ಟಿ**

ಈ ತನಿಖಾ ಠಾಣೆಗೆ ಈ ಕಾರ್ಯಗಳು ಅನ್ವಯಿಸುವುದಿಲ್ಲ.

13. **ವಿನಾಯಿತಿಗಳು ಮತ್ತು ಅನುಮತಿಗಳನ್ನು ಪಡೆದಿರುವ ಫಲಾನುಭವಿಗಳ ಪಟ್ಟಿ**

ಸಾರಿಗೆ ಇಲಾಖೆಗೆ ಈ ಕಾರ್ಯಗಳು ಅನ್ವಯಿಸುವುದಿಲ್ಲ

14. **ಈ ಕಛೇರಿಯಲ್ಲಿ ಹೊಂದಿರುವ ಮಾಹಿತಿಯನ್ನು ಗಣಕೀಕರಣಗೊಳಸಿರುವ ಬಗ್ಗೆ ವಿವರ.**

ಈ ತನಿಖಾ ಠಾಣೆಯು ಪೂರ್ಣವಾಗಿ ಗಣಕೀಕರಣಗೊಂಡಿಲ್ಲ

ರಹದಾರಿಯ ಮಾಹಿತಿಗಳು ಭಾಗಶ: ದೊರೆಯುತ್ತದೆ.

15. **ಸಾರ್ವಜನಿಕ ಮಾಹಿತಿ ಪಡೆಯಲು ಒದಗಿಸಿರುವ ಸೌಲಭ್ಯಗಳು ಮತ್ತು ಸಾರ್ವಜನಿಕ ಉಪಯೋಗಕ್ಕೆ ಗ್ರಂಥಾಲಯ ಅಥವಾ ವಾಚನಾಲಯ ಒದಗಿಸಿದಲ್ಲಿ ಅದರ ಕೆಲಸದ ಸಮಯ**

ವಾಹನ ಚಾಲಕ / ಮಾಲೀಕರ ಮಾಹಿತಿಗಾಗಿ ಕಛೇರಿಯಲ್ಲಿ ಶುಲ್ಕ / ತೆರಿಗೆ ಸೂಚನಾ ಫಲಕದಲ್ಲಿ ಪ್ರದರ್ಶಿಸಲಾಗಿದೆ. ವಿವರಗಳನ್ನು ತನಿಖಾ ಠಾಣೆಯು ದಿನದ 24 ಗಂಟೆಗಳು ಕಾರ್ಯನಿರ್ವಹಿಸುತ್ತಿದ್ದು ಸಾರ್ವಜನಿಕರು ಮಾಹಿತಿ ಪಡೆಯಲು ಬೆಳಗ್ಗೆ 10 ರಿಂದ ಸಂಜೆ 5.30 ರವರೆಗೆ ಸಾರ್ವಜನಿಕ ರಜಾ ದಿವಸಗಳನ್ನು ಹೊರತುಪಡಿಸಿ ಪಡೆಯಬಹುದು.

16. **ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು, ಹುದ್ದೆ ಮತ್ತು ಇತರೆ ವಿವರಗಳು**

| | | |
|---|---|---|
| ಸಾರ್ವಜನಿಕ ಮಾಹಿತಿ ಪ್ರಾಧಿಕಾರ ಮತ್ತು ಮಾಹಿತಿ ಅದಿಕಾರಿ | : | ಟಿ. ತಿಮ್ಮರಯಪ್ಪ<br>ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ<br>ಗೌರಿ ಬಿದನೂರು ತನಿಖಾ ಠಾಣೆ,<br>ಗೌರಿ ಬಿದನೂರು, ಚಿಕ್ಕಬಳ್ಳಾಪುರ ಜಿಲ್ಲೆ |
| ಮೇಲ್ಮನವಿ ಪ್ರಾಧಿಕಾರ | : | ಮಾನ್ಯ ಜಂಟಿ ಸಾರಿಗೆ ಆಯುಕ್ತರು<br>(ಬೆಂಗಳೂರು ಗ್ರಾಮಾಂತರ)<br>4ನೇ ಮಹಡಿ, ಪೋಡಿಯಂ ಬ್ಲಾಕ್<br>ವಿ.ವಿ. ಟವರ್, ಡಾ. ಅಂಬೇಡ್ಕರ್ ವೀದಿ<br>ಬೆಂಗಳೂರು – 560 001<br>ದೂರವಾಣಿ : 080-22866670 |

17. **ನಿಯಮಿಸಬಹುದಾದಂತಹ ಇತರೆ ಮಾಹಿತಿಯನ್ನು ಪ್ರಕಟಿಸಬಹುದು.**

ಪ್ರಕಟಣೆಗಳನ್ನು ಪ್ರತಿವರ್ಷವೂ ಪರಿಷ್ಕರಿಸಲಾಗುತ್ತದೆ

ಸಾರಿಗೆ ಇಲಾಖೆಯ ವೆಬ್ ಸೈಟ್ : http://rto.kar.nic.in

ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ

ಗೌರಿ ಬಿದನೂರು ತನಿಖಾ ಠಾಣೆ
ಗೌರಿ ಬಿದನೂರು,